Municipality will draw the amount and spend it.

Sri A. V. NARASIMHA REDDY.—They are expected to spend the amount by the end of the financial year; is it not?

Sri T. CHANNIAH.—If the amount allotted is credited to the funds of the Municipality, it will not lapse.

Mr. SPEAKER.—I understand the question put by the Hon'ble Member, but it only relates to the grants and why it is not spent.

Sri A. V. NARASIMHA REDDY.—You have been pleased to state in clause (2) of your answer that this amount will be spent both for acquisition of lands, for forming sites and also for giving grants by way of subventions for construction of houses. If that is so, are there not houses for which subvention could be given and the whole amount could be spent within the financial year?

Sri T. CHANNIAH.—That is our expectation.

ಶ್ರೀ ಆರ್. ಅನಂತರಾಮ್.—ಈ ಉಳಿತಾಯವಾಗತಕ್ಕಂಥ ಡಿಪ್ರೆಸ್ಡ್ ಕ್ಲಾಸ್ ಅಮಿಲಿಯೋರೆಷನ್ ಫಂಡಿನ ಬಗ್ಗೆ ಒಂದು ಪ್ರತ್ಯೇಕವಾದ ಫಂಡನ್ನು ನಿರ್ಮಿಸುವುದಾಗಿ ತಿಳಿಸಿದ್ದಿರಲ್ಲಾ ಆ ಫಂಡನ್ನು ಈಗ ಏರ್ಪಾಡು ಮಾಡಿದ್ದೀರಾ?

Mr. SPEAKER.—Have you made it non-lapsable?

Sri T. CHANNIAH.—Such a procedure was approved, but there is no amount available in that fund.

ಶ್ರೀ ಆರ್. ಅನಂತರಾಮ್.—ಈಗ ಈ ಉಳಿದಿರತಕ್ಕ 7,000 ರೂಪಾಯಿಗಳನ್ನು ಆ ನಿಧಿಗೆ ಸೇರಿಸುವುದು ಒಳ್ಳೆಯದಲ್ಲವೇ?

ಶ್ರೀ ಟಿ. ಚನ್ನಯ್ಯ.—ಹಾಗೇನಾದರೂ ಆ ಮೊಬಲಗು ಖರ್ಚಾಗದೆ ಉಳಿದ ಪಕ್ಷದಲ್ಲಿ ಅದನ್ನು ಸೇರಿಸಲಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಸ್ವಾಮಿ, ಈ ಮೈಸೂರು ಸಿಟಿಗೂ ಮತ್ತು ನಂಜನಗೂಡಿನ ಇತರ ಭಾಗಗಳಿಗೂ ಈ ಮೊಬಲಗನ್ನು ಒಂದೇ ಕಾಲದಲ್ಲಿ ಅಲ್ಲವೇ ತಾವು ಮಂಜೂರು ಮಾಡುವುದು?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಈಗ ತಾವು ಈ ಗ್ರಾಂಟನ್ನು ಕೊಡುತ್ತಿರುವುದು ಈ ಮೈಸೂರು ಸಿಟಿ ಮತ್ತು ಈ ಬೆಂಗಳೂರು ಸಿಟಿಯಲ್ಲಿರತಕ್ಕಂಥ ಪ್ರಜಾ ಸಂಖ್ಯೆಯ ಆಧಾರದ ಮೇಲೆ ಅಲ್ಲವೇ?

Mr. SPEAKER.—That is one of the considerations.

Sri T. CHANNIAH.—That is the basis.

ಶ್ರೀ ಜಿ. ಪಾಪಣ್ಣ.—ಈ ವಿಚಾರ ನಾಲ್ಕು ಐದು ತಿಂಗಳ ಕಾಲ ಹೀಗೆ ನಿಧಾನವಾಗುವುದಕ್ಕೆ ಕಾರಣ ಏನು?

ಶ್ರೀ ಟಿ. ಚನ್ನಯ್ಯ.—ನಾನಾಗಲೇ ಹೇಳಿದ ಹಾಗೆ ಈ ಮೊಬಲಗನ್ನು ನಾವು ಮುಂಚೆಯೇ ಒದಗಿಸಿದ್ದೆವು. ಆದರೆ ಕೆಲವು ಕಾರಣಗಳಿಂದ ತಡವಾಯಿತು.

Depressed Class (Sites for applicants of Itakadibbanahalli and other Hoblis)

Q.—101. Sri C. T. HANUMANTHAIYA (Pavagada—Scheduled Castes).—Will the Government be pleased to state:—

(*a*) the number of applications received from the Depressed Class people in the three hoblis of Itakadibbanahalli, Midagesi and Kodigenahalli of Madhugiri Taluk requesting for grants of sites to them to build houses and the number of villages from which applications are so received;

(*b*) out of them, the number of applications pending, the records having not been completed and sites not been given as yet (hobliwar information to be given)?

A.—Sri T. CHANNIAH (Minister for Public Health and Local Self-Government).—

(*a*)	*No. of Villages*	*No. of applications received*
Itakadibbanahalli.	2	2
Midagesi ...	6	9
Kodigenahalli ...	2	3
Total ...	10	14

(*b*)	*No. of applications pending.*
Itakadibbanahalli ...	1
Midagesi ...	4
Kodigenahalli ...	1
Total ...	6

ಶ್ರೀ ಸಿ. ಟಿ. ಹನುಮಂತಯ್ಯ.—ಅರ್ಜಿಗಳ ಸಂಖ್ಯೆ ಇಪ್ಪತ್ತು ಎರಡು ಎಂಬುದಾಗಿ ತಿಳಿಸಿದ್ದೀರಿ. ಈ ಅರ್ಜಿಗಳ ಸಂಖ್ಯೆ ಐದು ಎಂದು ಇರಬೇಕಾಗಿತ್ತಲ್ಲವೆ ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ನಮಗೆ ಬಂದಿರತಕ್ಕ ವರಯ ಪ್ರಕಾರ ಅದು ಎರಡು ಎಂದು ಇದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಇತ್ಯರ್ಥವಾಗದ ಹಾಗೆ ಉಳಿದಿರತಕ್ಕ ಅರ್ಜಿಗಳ ಸಂಖ್ಯೆ ಒಂದು ಎಂದು ಹೇಳಿದ್ದೀರಿ. ಇದು ಏಳು ಎಂದು ಹೇಳಬೇಕಾಗಿತ್ತಲ್ಲವೇ ?

ಶ್ರೀ ಟಿ. ಚನ್ನಯ್ಯ.—ಉತ್ತರದಲ್ಲಿ ಆರು ಎಂದು ತಿಳಿಸಿದೆ.

ಶ್ರೀ ಸಿ. ಟಿ. ಹನುಮಂತಯ್ಯ.—ಆ ಇಟಕದಿಬ್ಬನ ಹಳ್ಳಿಗೆ ಇಷ್ಟು ದಿವಸಗಳವರೆಗೂ ಮಂಜೂರು ಮಾಡದೆ ತಡವಾಗಲು ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಈ ಅರ್ಜಿಗಳು ನಮಗೆ ಬಂದದ್ದು ಈಗ್ಗೆ ಒಂದು ಎರಡು ತಿಂಗಳ ಕೆಳಗೆ. ಇಷ್ಟು ಹೊರತು ನಮ್ಮಿಂದೇನೂ ನಿಧಾನವಾಗಿಲ್ಲ. ಈ ರೀತಿ ಒಂದು ಎರಡು ತಿಂಗಳು ಬಾಕಿ ನಿಂತಿರತಕ್ಕಂಥ ಅರ್ಜಿಗಳು ನನ್ನಲ್ಲಿ ಆರು ಇವೆ.

ಶ್ರೀ ಸಿ. ಟಿ. ಹನುಮಂತಯ್ಯ.—ಈ ಕಾರ್ಯವನ್ನು ಈ ಸಾಲಿನಲ್ಲೇ ಮಾಡಿಸಲು ತಾವು ಅವರಿಗೆ ಸಲಹೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಪ್ರಯತ್ನ ಮಾಡಲಾಗುತ್ತದೆ.

Bridge across Dakshina Pinakini near Sulibele.

Q.—417. **Sri H. T. PUTTAPPA** (Hoskote-Anekal-Scheduled Castes).—

Will the Government be pleased to state :—

the reason for not taking up the construction of a bridge across the Dakshina Pinakini river in the road from Sulibele to Devanahalli in Hoskote Taluk though estimate therefor has been prepared ?

A.—**Sri T. CHANNIAH** (Minister for Public Health and Local Self-Government).—

An estimate amounting to Rs. 32,500 for construction of a High Level Causeway across Dakshina Pinakini River near Sulebele has been administratively approved by the Government in July 1955. Technical sanction has not yet been accorded to the estimate which has been sent by the Executive Engineer to the Superintending Engineer after attending to certain observations. Tenders have been called for by the Executive Engineer and were sent to the Superintending Engineer on 15th February 1956 for approval pending technical sanction to the estimate. The work will be taken up after the tenders are disposed of by the competent authority.

ಶ್ರೀ ಎಚ್. ಟಿ. ಪುಟ್ಟಪ್ಪ.—ಈ ಟೆಂಡರುಗಳನ್ನು ಕರೆಯತಕ್ಕ ಅರ್ಹರಾದ ಅಧಿಕಾರಿಗಳು ಯಾರು ?

ಶ್ರೀ ಟಿ. ಚನ್ನಯ್ಯ.—ಪಿ.ಡಬ್ಲು.ಡಿ. ಅಧಿಕಾರಿಗಳು.

ಶ್ರೀ ಎಚ್. ಟಿ. ಪುಟ್ಟಪ್ಪ.—ಆ ರೀತಿ ಟೆಂಡರ್ ಅರ್ಜಿಗಳನ್ನು ಯಾರಾದರೂ ಕೊಟ್ಟಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ಕರೆದಿರುತ್ತಾರೆ. ಆದರೆ ಯಾರಾದರೂ ಟೆಂಡರ್ ಕೊಟ್ಟಿದ್ದಾರೋ ಇಲ್ಲವೋ ಆ ವಿಚಾರವನ್ನು ಅವರು ಈಗ ನನಗೆ ತಿಳಿಸಿಲ್ಲ.

ಶ್ರೀ ಜಿ. ಪಾಪಣ್ಣ.—ಈ ಎಕ್ಸಿಕ್ಯುಟೀವ್ ಇಂಜಿನಿಯರ್ ಅವರಿಗೆ ಈ ಟೆಂಡರ್ ಅರ್ಜಿಯನ್ನು ಸ್ವೀಕರಿಸುವುದಕ್ಕೆ ಕೊನೆಯ ತಾರೀಖು ಯಾವುದು ?

ಶ್ರೀ ಟಿ. ಚನ್ನಯ್ಯ.—ಆ ವಿವರಗಳು ಈಗ ಸದ್ಯದಲ್ಲಿ ನನ್ನಲ್ಲಿರುವುದಿಲ್ಲ.

ಶ್ರೀ ಜಿ. ಪಾಪಣ್ಣ.—ಈ ಅಡ್ಮಿನಿಸ್ಟ್ರೇಷ್ಟ್ ಮಂಜೂರಾತಿ ಆಗಿ 9 ತಿಂಗಳು ಆಗಿದ್ದರೂ ಟೆಕ್ನಿಕಲ್ ಮಂಜೂರಾತಿ ಆಗದೆ ತಡವಾಗಲೂ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಈಗ ಅದು ಮಂಜೂರಾಗಿದೆ. ಈ ಟೆಂಡರುಗಳನ್ನು ಹೋದ ತಿಂಗಳಿನಲ್ಲಿ ಕರೆಯಲಾಗಿತ್ತು.

ಶ್ರೀ ಜಿ. ಪಾಪಣ್ಣ.—ಟೆಕ್ನಿಕಲ್ ಸ್ಯಾಂಕ್ಷ್ಟ್ ಆಗಿಲ್ಲ ಎಂದು ತಮ್ಮ ಉತ್ತರದಲ್ಲಿ ಇದೆ. ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷ್ಟ್ ಆಗಿ 9 ತಿಂಗಳಾಗಿದೆ. ಇಷ್ಟು ಕಾಲಾವಕಾಶ ಏಕೆ ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷ್ಟ್ ಆಗಿದೆ. ಟೆಕ್ನಿಕಲ್ ಸ್ಯಾಂಕ್ಷ್ಟ್ ಕೊಡಲಾಗುತ್ತದೆ. ತದನಂತರ ಟೆಂಡರುಗಳನ್ನು ಕರೆಯಲಾಗುತ್ತದೆ. ಎಸ್ಟಿಮೇಟು ತಯಾರುಮಾಡುವುದು ವಗೈರೆ ಕೆಲಸಗಳು ನಿಧಾನವಾಗುತ್ತವೆ. ಅಷ್ಟೇ ಹೊರತು ಇನ್ನೇನೂ ಅಲ್ಲ.

ಶ್ರೀ ಜಿ. ಪಾಪಣ್ಣ.—ತಮಗೆ ಬೇಕಾದ ಕಂಟ್ರ್ಯಾಕ್ಟರುಗಳು ಯಾರೂ ಮುಂದೆ ಬರದೇ ಇರುವುದರಿಂದ ಈ ರೀತಿ ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅಂಥ ನಿದರ್ಶನ ಯಾವುದೂ ಇಲ್ಲ.

ಶ್ರೀ ಜಿ. ಪಾಪಣ್ಣ.—ಮುಂದೆ ಮಳೆಗಾಲ ಪ್ರಾರಂಭವಾದರೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಈಗ ಇನ್ನು ಮಳೆಗಾಲ ಪ್ರಾರಂಭವಾಗಿಲ್ಲ, ಟೆಂಡರ್ಸ್ ಕಾಲ್‌ಫಾರ್ ಮಾಡಿದಾಗ ಯಾರಾದರೂ ಹಾಕಿ ಕೆಲಸ ತೆಗೆದುಕೊಂಡು ಮಾಡಬಹುದು. ಅದಕ್ಕೆ ಯಾವ ಅಡ್ಡಿಯೂ ಇಲ್ಲ.

ಶ್ರೀ ಜಿ. ಪಾಪಣ್ಣ.—ಎಷ್ಟೋಜನ ಕೆಲಸ ಮಾಡುವುದಕ್ಕೆ ಮುಂದೆ ಬಂದು, ಇತ್ಯರ್ಥವಾಗದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?